

ಕಾಡೂರು ಪಂಚಾಯತಿ ಮದಕದ ಹೂಳೆತ್ತುತ್ತಿರುವ ಉದ್ಯೋಗ ಭರವಸೆ ಯೋಜನೆಯ ಹೆಣ್ಮಕ್ಕಳ ತಂಡ



ಶಂಭುಶಂಕರ ರಾವ್ ಅವರೇ ನಿರ್ಮಿಸಿದ ಖಾಸಗಿ ಮದಗ



ಕೆಂಜಾರು ಗ್ರಾಮದ ಶಾಂತಿಕೆರೆ ಮದಕ

(ಮುರ ಮಣ್ಣು) ಮಣ್ಣಿನ ವಿಶೇಷ ರಚನೆ. ಇದು ಪೂರ್ತಿ ಮನುಷ್ಯನಿರ್ಮಿತ ಅಲ್ಲ. ಪ್ರಾಕೃತಿಕವಾಗಿರುವ ಅನುಕೂಲವನ್ನು ನಮ್ಮ ಹಿರಿಯರು ಜಾಣ್ಮೆಯಿಂದ ಮಾರ್ಪಡಿಸಿರುವ ಜಲಾಶಯ. ಅವರು ಭೌಗೋಳಿಕ ಏರುಪ್ರದೇಶಗಳಲ್ಲಿ, ಮೂರೂ ದಿಕ್ಕುಗಳಲ್ಲಿ ಇಳಿಜಾರು ಇರುವ ಪ್ರದೇಶವನ್ನು ಆಯುತ್ತಿದ್ದರು. ಇದರ ಕೆಳಭಾಗ, ಅಂದರೆ, ನಾಲ್ಕನೆಯ ದಿಕ್ಕಿನಲ್ಲಿ, ಕಂಠದಂತೆ ಅಗಲ ಕಿರಿದಾದ ಎಡೆಯಲ್ಲಿ ತಡೆಗೋಡೆ ಕಟ್ಟುವ ಕೆಲಸ ಮಾತ್ರ ಮನುಷ್ಯರದಾಗಿತ್ತು.

ಕೆಲವು ಮದಗಗಳಿಂದ ಮಣ್ಣು ಎತ್ತಿ ಪಾತ್ರೆಯ ಆಳ ಹೆಚ್ಚಿಸಿದ್ದಿರಬಹುದು. ಹಿಂದಿನ ಕಾಲದಲ್ಲಿ ಮಣ್ಣುಪಳ್ಳದಿಂದ ಹಂಚು ಕಾರ್ಖಾನೆಗೆ ಮಣ್ಣು ಒಯ್ಯುವ ಪರಿಪಾಠವಿತ್ತಂತೆ.

ಸಾಮಾನ್ಯವಾಗಿ ಮದಗ/ಕ ಮತ್ತು ಕೆರೆಗಳ ನಡುವೆ ಜನ ವ್ಯತ್ಯಾಸ ಗುರುತಿಸುವುದು ಕಡಿಮೆ. ಬಹುತೇಕ ಮದಗಗಳನ್ನು ಕೆರೆ ಎಂದೇ ಕರೆಯುತ್ತಾರೆ. ಆದರೆ ವಿಶ್ಲೇಷಿಸಿ ನೋಡಿದರೆ, ಇವೆರಡರ ನಡುವೆ ಸ್ಪಷ್ಟ ವ್ಯತ್ಯಾಸಗಳು ಇರುತ್ತವೆ.

ಕೆರೆ ಎನ್ನುವುದು ಸಂಪೂರ್ಣ ಮಾನವನಿರ್ಮಿತ ಪಾತ್ರೆ. ಭೂಮಿಯಲ್ಲಿ ಇಂಗಿದ ಮಳೆನೀರಿನ ಒರತೆಯನ್ನು ಸಂಗ್ರಹ ಮಾಡುವುದೇ ಅದರ ಲಕ್ಷ್ಯ. ಇದು ಹೆಚ್ಚಾಗಿ ತಗ್ಗುಪ್ರದೇಗಳಲ್ಲಿ ಇರುತ್ತದೆ. ಇದನ್ನು ಕೃಷಿಗೆ ನೀರಾವರಿಗಾಗಿ ತೋಡುವುದೇ ಹೆಚ್ಚು. ಮದಗ ಇಂಗದೆ ಇಳಿದೋಡುವ ಲಕ್ಷಗಟ್ಟಲೆ, ಅಲ್ಲಲ್ಲ, ಕೋಟಿಗಟ್ಟಲೆ ಲೀಟರು ಮಳೆನೀರನ್ನು ತಡೆದು ಇಂಗಿಸುವ ಜಲಾಶಯ. ಅದರಲ್ಲಿ ಒರತೆ (ಜಲ) ಇರಲೇಬೇಕೆಂದಿಲ್ಲ. ಬೇಸಿಗೆ ಕೊನೆಯವರೆಗೂ ನೀರು ಇದ್ದೇ ಇರುತ್ತದೆ ಎನ್ನುವಂತಿಲ್ಲ. ಮಳೆಗಾಲ ಮುಗಿದ ನಂತರ ಹಿಡಿದಿಟ್ಟ ನೀರೆಲ್ಲಾ ಇಂಗಿ ಇಡೀ ಮದಗ ಬತ್ತಿಹೋಗುವುದು ಸಾಮಾನ್ಯ.

ಹೆಚ್ಚಿನ ಮದಗಗಳನ್ನೂ ಭತ್ತದ ಎರಡನೆ ಬೆಳೆಗೆ ಅಗತ್ಯ ಬಿದ್ದರೆ ನೀರು ಹರಿಸಲೆಂದು ನಿರ್ಮಿಸಿದ್ದರು. ದಶಕಗಳ ಹಿಂದೆ ಉಡುಪಿ ಜಿಲ್ಲೆಯಲ್ಲಿ ಭತ್ತದ ಕೃಷಿ ಚೆನ್ನಾಗಿಯೇ ಇತ್ತು. ಕಾಲ ಬದಲಾದಂತೆ, ಬೇರೆಬೇರೆ ಸಮಸ್ಯೆಗಳು ಹುಟ್ಟಿಕೊಂಡವು. ಕಾರ್ಮಿಕ ಸಮಸ್ಯೆ, ನಾಣ್ಯದ ಬೆಳೆಗಳತ್ತ ಒಲವು, ಭತ್ತದ ಬೆಳೆಯನ್ನು ಬರಬರುತ್ತಾ ಕಣ್ಮರೆಯಾಗಿಸಿಬಿಟ್ಟಿದೆ.

'ಭತ್ತದ ಕೃಷಿಯ ಪೂರಕ ವ್ಯವಸ್ಥೆ' ಎಂದೇ ಸುತ್ತಲಿನ ಸಮಾಜ ಮದಗಗಳನ್ನು ಅರ್ಥೈಸಿಕೊಂಡಿದೆ. ಈ ಕಾರಣದಿಂದ, ಭತ್ತದ ಕೃಷಿ ಮಾಯವಾಗುವುದರೊಂದಿಗೆ ಈ ಜಲನಿಧಿಗಳ ಬಗ್ಗೆ ಒಲವೂ ಕುಗ್ಗಿತು. ಭತ್ತದ ಕೃಷಿಗೆ ನೀರುಣಿಸುವುದು ಮದಗದ ಪ್ರತ್ಯಕ್ಷ ಉಪಯೋಗ. ಭಾರೀ ಪ್ರಮಾಣದಲ್ಲಿ ಮಳೆನೀರಿನ ಮರುಪೂರಣ ಮಾಡುವುದು ಇನ್ನೂ ಹೆಚ್ಚಿನ ಪರೋಕ್ಷ ಪ್ರಯೋಜನ. ಎರಡನೆಯದನ್ನು ಅರ್ಥಮಾಡಿಕೊಂಡವರು ಬಹು ಕಡಿಮೆ!

ತನ್ನೊಡಲ ಮಳೆನೀರು ಇಂಗಿದ ಮೇಲೆ, ಅಂದರೆ, ದೀಪಾವಳಿ ಸಮಯಕ್ಕೋ ಜನವರಿಯಲ್ಲೋ ಮದಗ ಬತ್ತಿ ಹೋಗಲೂಬಹುದು. ಆದರೆ ಅಷ್ಟರೊಳಗೆ ಅದು ತನ್ನ ಸುತ್ತಲಿನ, ಕೆಳಪ್ರದೇಶದ

## ಮದಗದ ವಿಶುವಲ್, ಊರವರ ಆಡಿಯೊ

ಊರ ಜನರು, ವಿದ್ಯಾರ್ಥಿಗಳು, ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳಿಗೆ ಮದಗದ ಮಹತ್ವ ತಿಳಿಸುವ ಕಾರ್ಯಕ್ರಮ ತುರ್ತು ಮತ್ತು ನಿರಂತರವಾಗಿ ನಡೆಯಬೇಕಿದೆ.

ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿ ಮತ್ತು ಅವರ ಸಹೋದ್ಯೋಗಿಗಳ ಭೇಟಿಗೆ ಒಂದು ದಿನ ನಿಗದಿ ಮಾಡಬೇಕು. ಅವರು ಬಂದಾಗ, ತಕ್ಕ ಮಟ್ಟಿಗೆ ಕೆಲಸ ಮಾಡುವ ಮತ್ತು ವಿನಾಶದ ಅಂಚಿನಲ್ಲಿರುವ – ಎರಡು ವಿಭಿನ್ನ ಮದಕ ತೋರಿಸುವುದು ಉಚಿತ. ಸುತ್ತಲಿನ ಜನರ ಜತೆ ಸಂವಾದ ನಡೆಸುವ ಅವಕಾಶ ಅಗತ್ಯ. ಇದೇ ರೀತಿಯ ಅರ್ಧ ಅಥವಾ ಏಕದಿನದ 'ಅಧ್ಯಯನ ಭೇಟಿ' ಕಾರ್ಯಕ್ರಮ ಪಂಚಾಯತ್ ಸದಸ್ಯರು, ಶಾಸಕ, ಸಂಸದರಿಗಾಗಿಯೂ ಹಮ್ಮಿಕೊಳ್ಳುವುದು ಉತ್ತಮ.

ವಿದ್ಯಾರ್ಥಿಗಳು, ಸರಕಾರೇತರ ಸಂಸ್ಥೆಗಳಿಗೂ 'ಮದಗ ದರ್ಶನ' ಮಾಡಿ ಕೈಲಾದಷ್ಟು ಹೂಳೆತ್ತುವ ಶ್ರಮದಾನದಲ್ಲಿ ಭಾಗವಹಿಸಲು ಕೇಳಿಕೊಳ್ಳಬಹುದು. ಹೈಸ್ಕೂಲು ವಿದ್ಯಾರ್ಥಿಗಳಿಗೆ 'ನಿಮ್ಮೂರ ಮದಗ ಗುರುತಿಸಿ ಪರಿಚಯಿಸಿ' ಸ್ಪರ್ಧೆ ಏರ್ಪಡಿಸಬಹುದು.

ಜಿಲ್ಲೆಯ ಶಾಲೆಗಳು ವರ್ಷಕ್ಕೊಂದು ದಿನ ಮದಕ ಅಧ್ಯಯನ ಪ್ರವಾಸ ಏರ್ಪಡಿಸಿದರೆ ಅದು ದೊಡ್ಡ ಕೊಡುಗೆ ಆಗಬಹುದು. ಆದರೆ ಮರೆಯಬಾರದು. ಮದಕಗಳಿಗೆ ಬಾಯಿಯಿಲ್ಲ. ಅವುಗಳ ಸರಿಯಾದ ಚಿತ್ರಣ ಕೊಡಬಲ್ಲ ಹಿರಿಯರು ಸ್ಥಳದಲ್ಲೇ ಸಿಗುವಂತೆ ಯೋಜಿಸಿಕೊಳ್ಳುವುದೂ ಭೌತಿಕವಾಗಿ ಮದಕ ನೋಡುವುದಕ್ಕಿಂತಲೂ ಮುಖ್ಯ. ಅಲ್ಲಲ್ಲಿನ ಒಳನೋಟ ಸಿಗದೆ ಅಧ್ಯಯನ ಭೇಟಿ ಫಲ ಕೊಡದು.

ಮದಕಗಳ ಪುನರುಜ್ಜೀವನಕ್ಕೆ 'ಸಿ.ಎಸ್.ಆರ್.' ಫಂಡುಗಳನ್ನು ಪಡೆಯುವ ಕಡೆಗೂ ಪ್ರಯತ್ನ ಮಾಡಬಹುದು. ಆಯಾಯಾ ಗ್ರಾಮಗಳಿಂದ ನಗರ ಸೇರಿದ ವಿದ್ಯಾವಂತರು ಸ್ವಲ್ಪ ದೀರ್ಘಕಾಲದ ಶ್ರಮ ವಹಿಸಿದರೆ ಈಗಿನ ನಿರಾಶಾದಾಯಕ ಚಿತ್ರ ಬದಲಿಸಲು ಸಾಧ್ಯ. 'ಮದಕ ಉಳಿಸಿ' ಎಂಬ ಮಾಧ್ಯಮ ಅಭಿಯಾನವನ್ನು ಆಕಾಶವಾಣಿ, ಜಿಲ್ಲೆಯ ದೈನಿಕ, ಟೀವಿಗಳು ಕೈಗೆತ್ತಿಕೊಂಡರೆ ಅದು ವೇಗವರ್ಧಕವಾದೀತು.